ಇವರು ಹೇಗೆ ಅಂದ ಚೆಂದವಾಗಿ ಭಟ್ಟರು ಇದ್ದಾರೋ ಆ ಭಟ್ಟರಿಗೆ ಇವರು ನೀರು ತಂದು ಕೊಡುವುದರಿಂದ ಕಸ ಗುಡಿಸುವುದರಿಂದ, ಹೂವು ತಂದು ಕೊಡುವುದರಿಂದ, ಅವರು ಪೂಜೆ ಮಾಡುತ್ತಾರೆ. ಅರ್ಚಕರಿಗೆ ನೀವು ಸಹಾಯ ಮಾಡುವಂತಹ ಸಂದರ್ಭದಲ್ಲಿ ಈ ಸಾಮಾಜಿಕವಾಗಿ ಸೇವೆ ಮಾಡಿಕೊಂಡು ಬಂದಿರುವ ಬಡವರ್ಗ ಇದೆಯಲ್ಲ ಅವರಿಗೂ ಕೂಡ ತಮ್ಮ ದೃಷ್ಟಿ ತಮ್ಮ ಅನುಗ್ರಹ ಕರುಣಿಸಲಿ ಅವರಿಗೂ ಸಹಾಯ ಮಾಡಿ ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಇದು ಬಹಳ ಉತ್ತಮವಾದಂತಹ ಸಲಹೆ. ಪ್ರಾಯಶಃ ಇದನ್ನು ಮಾನ್ಯ ಸದಸ್ಯರಾದ ಲಲಿತನಾಯಕ್ ಅವರೂ ಕೂಡ ಒಪ್ಪಿಕೊಳ್ಳುತ್ತಾರೆ. ಹಿಂದೆ ಈ ರೀತಿ ಸೇವೆ ಮಾಡತಕ್ಕಂಥವರಿಗೆ ಆಯಾ ಎಂದು ಹೇಳಿ ಭೂಮಿಯನ್ನು ಮತ್ತು ದರ್ಜಿಯನ್ನು ಕೊಡತಕ್ಕಂಥಾದ್ದು ಇತ್ತು. ಈಗ ಅವರನ್ನು ಇದರಲ್ಲಿ ಸೇರಿಸಿಕೊಳ್ಳಬೇಕೆನ್ನುವುದು ಸಾಮಾಜಿಕ ನ್ಯಾಯ. ಇವರ ಸೇವೆ ಇಲ್ಲದಿದ್ದರೆ ಅಲ್ಲಿ ಅರ್ಚಕರು ಏನೂ ಮಾಡುವುದಕ್ಕಾಗುವುದಿಲ್ಲ.

(ಆ) ಉಡುಪಿ ಜಿಲ್ಲೆಯಲ್ಲಿ ಸ್ಟ್ಯಾಂಪ್ ಪೇಪರ್ ಕೊರತೆ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೇ, ನಮ್ಮ ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಿನಿಂದ ಸ್ಟ್ಯಾಂಪ್ ಪೇಪರ್ ಕೊರತೆ ಇದೆ. ಕಳೆದ ಒಂದು ತಿಂಗಳಿನಿಂದ ಸ್ಟ್ಯಾಂಪ್ ಪೇಪರ್ ಸಿಗುತ್ತಿಲ್ಲ. ಯಾವುದೇ ಒಂದು ಅಗ್ರಿಮೆಂಟ್ ಆಗಬೇಕಾದರೆ ಅಥವಾ ಪವರ್ ಆಫ್ ಅಟಾರ್ನಿ ಆಗಬೇಕಾದರೆ ಈ ಸ್ಟ್ಯಾಂಪ್ ಪೇಪರ್ ಬೇಕಾಗಿದೆ. ಬೇರೆ ಜಿಲ್ಲೆಗಳಿಂದ ಸ್ಟ್ಯಾಂಪ್ ಪೇಪರ್ ಖರೀದಿ ಮಾಡಬೇಕಾಗಿದೆ. ಎಲ್ಲಾ ಜನರಿಗೆ ಈ ಸಮಸ್ಯೆ ಇದೆ.

ಶ್ರೀ ಬಿ.ಸೋಮಶೇಖರ್ (ಮಾನ್ಯ ಕಂದಾಯ ಸಚಿವರು): ಆದಷ್ಟುಬೇಗ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಉಪಾಧ್ಯಕ್ಷರು: ಈಗ ಮುಂದುವರೆದ ಬೇಡಿಕೆಗಳ ಮೇಲಿನ ಚರ್ಚೆ.